ಬೆಂಗಳೂರು ನಗರಕ್ಕೆ ತಿಂಗಳಿಗೆ ಬಿಡುಗಡೆ ಮಾಡುತ್ತಿರುವ ಆಹಾರ ಧಾನ್ಯಗಳ ಪ್ರಮಾಣ

440(632). ಶ್ರೀ ಪೆರಿಕಲ್ ಎಂ. ಮಲ್ಲಪ್ಪ,(ಚಿಕ್ಕಪೇಟೆ):- ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ಬೆಂಗಳೂರು ನಗರಕ್ಕೆ ತಿಂಗಳಿಗೆ ಬಿಡುಗಡೆ ಮಾಡುತ್ತಿರುವ ಅಕ್ಕಿ, ಗೋಧಿ, ಸಕ್ಕರೆ ಮತ್ತು ಸೀಮೆಎಣ್ಣೆ ಪ್ರಮಾಣ ಎಷ್ಟು?

ಆ) ಕಳೆದ ನವೆಂಬರ್ 1991 ರಿಂದ ಪಡಿತರ ವಸ್ತುಗಳ ಹಂಚಿಕೆ ಪ್ರಮಾಣದಲ್ಲಿ ಕಡಿತವಿತ್ತೇ?

ಇ) ಹಾಗಿದ್ದಲ್ಲಿ ಎಷ್ಟು ಕಡಿಮೆ ಮಾಡಲಾಗಿದೆ?

ಈ) ಸರ್ಕಾರವು ಕೇಂದ್ರ ಸರ್ಕಾರವನ್ನು ಮೊದಲಿನ ಪ್ರಮಾಣದ ಹಂಚಿಕೆಯನ್ನೇ ನೀಡುವಂತೆ ವಿಶೇಷವಾಗಿ ಅಕ್ಕಿ, ಸೀಮೆಎಣ್ಣೆ ಮತ್ತು ಸಕ್ಕರೆ ಕುರಿತು ಕೋರಲಾಗಿದೆಯೇ?

ಉ) ಹಾಗಿದ್ದಲ್ಲಿ ಹಿಂದಿನ ಪ್ರಮಾಣದ ಹಂಚಿಕೆಯನ್ನೇ ಪಡೆಯಲಾಗುವುದೇ?

ಶ್ರೀ ಟಿ.ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):-

ಅ) ಫೆಬ್ರವರಿ 1992ರಲ್ಲಿ ಈ ಕೆಳಕಂಡಂತೆ ಹಂಚಿಕೆಯಾಗಿರುತ್ತದೆ.

ಅಕ್ಕಿ - 10,665 ಮೆ.ಟ
ಗೋಧಿ - 6,400 ಮೆ.ಟ.
ಸಕ್ಕರೆ - 3,658 ಮೆ.ಟ.
ಸೀಮೆಎಣ್ಣೆ - 10,553 ಕಿ.ಲೀ.

ಆ) ನವೆಂಬರ್ 1991 ರಿಂದ ಸಕ್ಕರೆ ಮತ್ತು ಸೀಮೆಎಣ್ಣೆ ಪ್ರಮಾಣದಲ್ಲಿ ಕಡಿತವಿರುವುದಿಲ್ಲ.

ರಾಜ್ಯಕ್ಕೆ ಗೋಧಿ ಮತ್ತು ಅಕ್ಕಿ ಹಂಚಿಕೆ ಕಡಿಮೆಯಾಗಿದ್ದರಿಂದ ಡಿಸೆಂಬರ್ 1991 ರಿಂದ ಅಕ್ಕಿ ಮತ್ತು ಗೋಧಿ ಹಂಚಿಕೆಯ ಪ್ರಮಾಣ ಕಡಿತಗೊಳಿಸಲಾಗಿದೆ.

ಇ) ಬೆಂಗಳೂರಿಗೆ ಈ ಕೆಳಕಂಡ ಪ್ರಮಾಣದಲ್ಲಿ ಅಕ್ಕಿ ಮತ್ತು ಗೋಧಿಯನ್ನು ಹಂಚಿಕೆ ಮಾಡಲಾಗಿದೆ.

ತಿಂಗಳು	ಅಕ್ಕಿ	ಗೋಧಿ
ನವೆಂಬರ್ 1991	14,195	7,400
ಡಿಸೆಂಬರ್ 1991	10,665	6,600
ಜನವರಿ 1991	11,665	6,660
ಫೆಬ್ರವರಿ 1991	10,665	6,400

ಈ) ಹೌದು.

ಉ) ಈವರೆಗೆ ಆ ಪ್ರಮಾಣದಲ್ಲಿ ಪಡೆದಿಲ್ಲ.

ರೈತರ ಸಾಲ ಮನ್ನಾ ಯೋಜನೆ

441(635). ಶ್ರೀ ಎಂ.ವಿ. ವೆಂಕಟಪ್ಪ (ಮುಳಬಾಗಿಲು):- ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ರೈತರ ಸಾಲ ಮನ್ನಾ ಯೋಜನೆ ಅಡಿಯಲ್ಲಿ ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಕೇಂದ್ರದ ಪಾಲು ಹಣವೇನಾದರೂ ಬಂದಿದೆಯೇ?